**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,**
**ಶ್ರೀರಂಗಪಟ್ಟಣ.**

ಸಿ.ಸಿ.ಃ 388/2018

ಪಿ. ಡಬ್ಲ್ಯುಃ 05
ಸಿ. ಡಬ್ಲ್ಯುಃ 06

ಸಾಕ್ಷಿದಾರರ ಹೆಸರು : ಕೃಷ್ಣೇಗೌಡ
ತಂದೆ/ಪತಿಯ ಹೆಸರು : ಲಕ್ಷ್ಮೇಗೌಡ
ವಯಸ್ಸು : 62 ವರ್ಷ
ವೃತ್ತಿ : ವ್ಯವಸಾಯ
ವಾಸ : ಡಾಮರಹಳ್ಳಿ ಗ್ರಾಮ

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 19.09.2023
ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ನಾನು ಸಹಿ ಮಾಡಬಲ್ಲೆ. ಸಾಕ್ಷಿಯು ನಿಪಿ.2 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.2-ಬಿ ಎಂದು ಗುರುತಿಸಲಾಯಿತು. ನಿಪಿ.2 ಕ್ಕೆ ನಾನು ಸುಮಾರು 5-6 ವರ್ಷಗಳ ಹಿಂದೆ ಕೆ.ಆರ್.ಸಾಗರದ ಬೃಂದಾವನ ಗಾರ್ಡನ ಹತ್ತಿರ ಬೇಕರಿ ಹತ್ತಿರ ಸಹಿ ಮಾಡಿದ್ದೇನೆ. ನಿಪಿ.2 ರಲ್ಲಿ ಬರೆದಿರುವ ಅಂಶಗಳು ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟಿ ಸವಾಲು ಅನುಮತಿ ನೀಡುವಂತೆ ಪ್ರಾರ್ಥಿಸಿದ್ದು ನೀಡಲಾಗಿದೆ)

**ಪಾಟಿ ಸವಾಲುಃ ಮಾನ್ಯ ಸ.ಸ.ಅ ರವರಿಂದ**

ದಿಃ 14.03.2018 ರಂದು ಮಧ್ಯಾಹ್ನ 03.30-04.00 ಸಮಯದಲ್ಲಿ ಕೆ.ಆರ್.ಸಾಗರ ಪೋಲೀಸ್ ನವರು ಕೆ.ಆರ್.ಸಾಗರ ಬೃಂದಾವನ ಗಾರ್ಡನ ಬಳಿಯ ಸಾರ್ವಜನಿಕ ಶೌಚಾಲಯದ ಕಟ್ಟಡದ ಮುಂಭಾಗದ ಸ್ಥಳದಲ್ಲಿ ನನ್ನ ಮತ್ತು ರಾಜು ರವರ ಸಮಕ್ಷಮ ಪಿರ್ಯಾದಿ ತೋರಿಸಿದ ಸ್ಥಳದಲ್ಲಿ ನಿಪಿ.2 ಮಹಜರ್ ಮಾಡಿದ್ದು ಆ ಸಮಯದಲ್ಲಿ ನಾನು ನಿಪಿ.2 ಕ್ಕೆ ಸಹಿ ಮಾಡಿದ್ದೇನು ಎಂದರೆ ಸರಿ.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ**

ಮಹಜರ್ ಗೆ ಹಾಜರು ಇರುವಂತೆ ಪೋಲೀಸರು ಲಿಖಿತ ನೋಟೀಸ್ ನೀಡಿಲ್ಲ. ಮಹಜರ್ ಮಾಡಲು ಸುಮಾರು 4 ಜನ ಪೋಲೀಸರು ಬಂದಿದ್ದರು ಅವರು ಯಾರೆಂದು

ನನಗೆ ಪರಿಚಯವಿಲ್ಲ. ಮಹಜರ್ ಮಾಡುವ ಕಾಲಕ್ಕೆ ಎಷ್ಟು ಜನ ಸ್ಥಳದಲ್ಲಿ ಹಾಜರು ಇದ್ದರು ಎಂದು ನಾನು ಗಮನಿಸಿಲ್ಲ. ನಿಪಿ.2 ಮಹಜರ್ ನಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ. ಮಹಜರ್ ನಲ್ಲಿನ ಅಂಶಗಳನ್ನು ಪೋಲೀಸರು ನನಗೆ ಓದಿ ಹೇಳಿಲ್ಲ. ಯಾವ ವಿಚಾರಕ್ಕೆ ಮಹಜರ್ ಮಾಡಿದರು ಎಂದು ನನಗೆ ಗೊತ್ತಿಲ್ಲ. ಮಹಜರ್ ಮಾಡಿದ ಸ್ಥಳದ ಚೆಕ್ಕು ಬಂದಿ ನನಗೆ ಹೇಳಲಾಗುವುದಿಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.